ದವರು ನಿರ್ಣಯ ಮಾಡಿದ್ದಾರೆ. ಇದೇರೀತಿಯಾಗಿ ಲ್ಯಾಂಡ್ ಅಕ್ವಿಸಿಷನ್ ಕೇಸಸ್ ಸರ್ಕಾರದ ಮಟ್ಟದಲ್ಲೇ ಪೆಂಡಿಂಗ್ ಇದೆ, ಅದನ್ನೆಲ್ಲಾ ತಾವು ಇಲ್ಲಿ ನಮೂದು ಮಾಡಿಲ್ಲ. ಈ ತರಹ ತಾವು ಎಷ್ಟು ಬಿಟ್ಟಿದ್ದೀರೋ ಏನೋ ಗೊತ್ತಿಲ್ಲ. Are you prepared to take the responsibility that this statement is a correct one ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಈಗ ನನಗೆ ಬಂದಿರತಕ್ಕಂಥ ಒಂದು ಇನ್‌ಫರ್ಮೇಷನ್ ಪ್ರಕಾರ ಆ ಸ್ಟೇಟ್‌ಮೆಂಟ್‌ನ್ನು ಕೊಟ್ಟಿದ್ದೇನೆ. ಆದರೆ ಲ್ಯಾಂಡ್ ಅಕ್ವಿಸಿಷನ್ ಕೇಸಸ್ ಹೆಚ್ಚು ಇರಬಹುದು. ಅದನ್ನು ವಿಚಾರಿಸಿ ತಕ್ಷಣ ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ. ಹೈಕೋರ್ಟ್‌ನಲ್ಲಿರುವ ಸ್ಟೇ ಅನ್ನು ವೆಕೇಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಹಾಗೆಯೇ ಜಿಲ್ಲಾಧಿಕಾರಿಗಳ ಮಟ್ಟದಲ್ಲಿರ ತಕ್ಕಂಥ ಪೆಂಡಿಂಗ್ ಕೇಸನ್ನೂ ಕೂಡ ಎಕ್ಸ್‌ಪಡೈಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ನಾನು ಈ ಸಭೆಯಲ್ಲಿ ಆಶ್ವಾಸನೆ ಕೊಡುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಈ ಸದನದ ಸದಸ್ಯರಿಗೆ ಇದನ್ನು ಕೇಳುವ ಹಕ್ಕು ಇದೆ. ಏತಕ್ಕಂದರೆ ತಕ್ಷಣವಾಗಿ ತೀವ್ರಗತಿಯಲ್ಲಿ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಗೈಡ್‌ಲೈನ್ಸ್ ಕೊಟ್ಟು ಇದನ್ನು ಬಗೆಹರಿಸಬೇಕು ಎಂದು ಹೇಳುತ್ತೇನೆ. ನಿಮ್ಮ ಹತ್ತಿರ ಏನು ಮಾಹಿತಿ ಇದೆಯೋ ಅದೇ ಮಾಹಿತಿ ನನ್ನಲ್ಲೂ ಇದೆ. ನಾನು ತಮ್ಮನ್ನು ಕೇಳುತ್ತೇನೆ, ಈ ಒಂದು ಉತ್ತರಕ್ಕೆ ಸರ್ಕಾರದ ಅಧೀನ ಕಾರ್ಯದರ್ಶಿ ಶ್ರೀ ಎಂ. ವೀರಭದ್ರಯ್ಯನವರು ಸಹಿ ಹಾಕಿದ್ದಾರೆ. ಅವರೇ ಇದನ್ನು ಸರಿಮಾಡಿದರೆ ಮಾಡಲಿ. ನಾವು ಏತಕ್ಕಾಗಿ ಈ ಸದನದ ಸಮಯವನ್ನು ಕಳೆಯಬೇಕು. 1977ರಿಂದ ಇಲ್ಲಿಯವರೆಗೆ ಲ್ಯಾಂಡ್ ಅಕ್ವಿಸಿಷನ್ ಕೇಸಸ್ ಏನು ಪೆಂಡಿಂಗ್ ಇದೆ ಅದನ್ನು ಬೇಗನೆ ತೀರ್ಮಾನ ಮಾಡಿದರೆ ಬಡವರಿಗೆ ಹೊಲ ಹಂಚುವುದಕ್ಕೆ ತೀವ್ರಗತಿಯಲ್ಲಿ ಕೆಲಸವಾಗುತ್ತದೆ. 1977ರಿಂದ ಇಲ್ಲಿಯವರೆಗೂ ಈ ಲ್ಯಾಂಡ್ ಅಕ್ವಿಸಿಷನ್ ಕೇಸಸ್ ಸರ್ಕಾರದ ಮಟ್ಟದಲ್ಲೇ ಪೆಂಡಿಂಗ್ ಇರುವುದಕ್ಕೆ ಕಾರಣ ಏನು ? ಯಾವ ಅಧಿಕಾರಿಗಳು ಇದಕ್ಕೆ ಜವಾಬ್ದಾರರು ? ಆ ಅಧಿಕಾರಿಗಳನ್ನೇನಾದರೂ ಸಸ್ಪೆಂಡ್ ಮಾಡಿದ್ದೀರಾ ? ಅಥವಾ ಡಿಸ್ಮಿಸ್ ಮಾಡಿದ್ದೀರಾ ? ಅಥವಾ ಮುಂದೆ ಏನಾದರೂ ಮಾಡುತ್ತೀರಾ ಎನ್ನುವುದನ್ನು ತಿಳಿಸಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಭೂಸ್ವಾಧೀನದ ಬಗ್ಗೆ ಕೆಲವು ವಿವರಗಳನ್ನು ಮಾನ್ಯ ಸದಸ್ಯರಿಗೆ ಕೊಡಲು ಬಯಸುತ್ತೇನೆ. ಕರ್ನಾಟಕ ಹೈಕೋರ್ಟ್‌ನಲ್ಲಿ ಇದರ ಬಗ್ಗೆ 3 ಸಾವಿರಕ್ಕಿಂತಲೂ ಹೆಚ್ಚು ಕೇಸಸ್‌ಗೆ ಸ್ಟೇ ಇದೆ.

ಶ್ರೀ ಕೆ. ಹೆಚ್. ಪಾಟೀಲ್.—ನಾನು ಕೇಳಿದ್ದು ಗದಗ್ ತಾಲ್ಲೂಕಿನಲ್ಲಿ ಎಲ್ಲಾ ಕೇಸ್‌ಗಳೂ ಕೂಡ ರೆವಿನ್ಯೂ ಡಿಪಾರ್ಟ್‌ಮೆಂಟ್‌ನಲ್ಲೇ ಕೊಳೆಯುತ್ತಾ ಇದೆ ಎಂದು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅದೇರೀತಿ ಅಲ್ಲಲ್ಲಿ ಇದೆ. ಅದಕ್ಕೆ ಕೆಲವು ಅಡಚಣೆಗಳು ಇರಬಹುದು. ಕೆಲವು ಹೈಕೋರ್ಟ್‌ನಿಂದ ಸ್ಟೇ ಬಂದಿವೆ, ಕೆಳಗಿನ ಹಂತದಲ್ಲಿ ಅರೀತಿಯಾಗಿ ಪೆಂಡಿಂಗ್ ಇರುವುದಕ್ಕೆ ಅಲ್ಲಿ ವೆಸ್ಟೆಡ್ ಇಂಟರೆಸ್ಟ್ ಜನ ಇರಬಹುದು. ಆ ಜನ ಆ ಜಮೀನನ್ನು ಬಿಟ್ಟುಕೊಡುವುದಕ್ಕೆ ತಯಾರಿಲ್ಲದೇ ಇರಬಹುದು. ಅದನ್ನು ಮುಚ್ಚಿಡುವುದಕ್ಕೆ ಪ್ರಯತ್ನ ಮಾಡುತ್ತಾ ಇಲ್ಲ. ಮಾನ್ಯ ಸದಸ್ಯರಿಗೆ ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ಇಡೀ ರಾಜ್ಯದಲ್ಲಿ ಭೂಸ್ವಾಧೀನ ಮಾಡತಕ್ಕಂಥಾ ಜಮೀನುಗಳು ಏನು ಇವೆ, ಬಡವರಿಗೆ ಹಂಚತಕ್ಕಂಥಾ ಈ ಜಮೀನಿನ ಪ್ರಕರಣಗಳು ಏನು ಇವೆ ಅದರ ಬಗ್ಗೆ ಬೇಗನೆ ಡಿಸ್‌ಪೋಸಲ್ ಮಾಡುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಏನು ಇದ್ದಾರೆ ಅವರು ಈ ಕೆಲಸವನ್ನು ಬೇಗನೆ ಮುಗಿಸುವುದಕ್ಕೆ ತಕ್ಕ ಕಾಯಕ್ರಮಗಳನ್ನು ತೆಗೆದುಕೊಳ್ಳುವ ಹಾಗೆ ಪ್ರಯತ್ನ ಮಾಡುತ್ತೇನೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಪ್ರಶ್ನೆ 56 (8)

ಶ್ರೀ ಎಂ. ಪಿ. ಕೇಶವಮೂರ್ತಿ.—ಸದಸ್ಯರು ಹಾಜರಿಲ್ಲ.

ವಿಷಯ.—ರಾಜ್ಯದಲ್ಲಿ ಇರುವ ಕೈಗಾರಿಕಾ ತರಬೇತಿ ಕೇಂದ್ರಗಳು.

ಪ್ರಶ್ನೆ ಸಂಖ್ಯೆ 57(71) ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ಶ್ರೀ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

(ಅ) ರಾಜ್ಯದಲ್ಲಿರುವ ಸರ್ಕಾರಿ ಹಾಗೂ ಸರ್ಕಾರೇತರ ಕೈಗಾರಿಕಾ ತರಬೇತಿ ಕೇಂದ್ರಗಳೆಷ್ಟು ;

(ಆ) ರೋಣ ತಾಲ್ಲೂಕಿನಲ್ಲಿ ಒಂದು ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರವನ್ನು ಪ್ರಾರಂಭಿಸುವ ಅವಶ್ಯಕತೆ ಇಷ್ಟೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿರುವುದೇ ;

(ಇ) ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಸಚಿವರು).—

(ಅ) (1) ಒಟ್ಟು 33 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳು.
(2) ಒಟ್ಟು 171 ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳು.
(ಜಿಲ್ಲಾವಾರು ಪಟ್ಟಿಯನ್ನು ಲಗತ್ತಿಸಲಾಗಿದೆ).

(ಆ) ಹೌದು.

(ಇ) ಈ ವರ್ಷದಲ್ಲಿ ಹಣಕಾಸಿನ ಮತ್ತು ಶಿಕ್ಷಕರ ಕೊರತೆಯಿಂದಾಗಿ ಹೊಸ ಕೈಗಾರಿಕಾ ತರಬೇತಿ ಸಂಸ್ಥೆ ತೆರೆಯಲು ಸಾಧ್ಯವಿಲ್ಲದಾಗಿದೆ.

ಜಿಲ್ಲೆಯಲ್ಲಿ ಇರುವ ಕೈಗಾರಿಕಾ ತರಬೇತಿ ಸಂಸ್ಥೆಗಳ ವಿವರಗಳು :

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಸರ್ಕಾರಿ	ಖಾಸಗಿ	ಒಟ್ಟು
1.	ಬೆಂಗಳೂರು	4	28	32
2.	ಬಳ್ಳಾರಿ	2	7	9
3.	ಬೆಳಗಾಂ	2	7	9
4.	ಬೀದರ್	1	5	6
5.	ಬಿಜಾಪುರ	1	20	21
6.	ಚಿತ್ರದುರ್ಗ ...	1	8	9
7.	ಚಿಕ್ಕಮಗಳೂರು	1	2	3
8.	ದಕ್ಷಿಣ ಕನ್ನಡ ...	1	10	11
9.	ಧಾರವಾಡ	1	25	26
10.	ಗುಲ್ಬರ್ಗಾ	2	11	13
11.	ಹಾಸನ	2	2	4
12.	ಕೊಡಗು	2	....	2
13.	ಕೋಲಾರ	2	13	15
14.	ಮಂಡ್ಯ	2	4	6
15.	ಮೈಸೂರು	1	7	8
16.	ರಾಯಚೂರು	1	3	4
17.	ಶಿವಮೊಗ್ಗ	2	5	7
18.	ತುಮಕೂರು	2	13	15
19.	ಉತ್ತರ ಕನ್ನಡ	3	1	4
	ಒಟ್ಟು ...	33	171	204

ಶ್ರೀ ಜ್ಞಾನದೇವ ದೊಡ್ಡಮೇಟಿ.—ಈಗ ಕೈಗಾರಿಕಾ ತರಬೇತಿ ಸಂಸ್ಥೆಗಳು ರಾಜ್ಯದಲ್ಲಿ ಏನು ಇವೆ ಅವುಗಳ ಕಾರ್ಯವಿಧಾನಗಳ ಬಗ್ಗೆ ಸರ್ಕಾರಕ್ಕೆ ಏನಾದರೂ ತೃಪ್ತಿ ಬಂದಿದೆಯೇ ?

ಶ್ರೀ ಡಿ. ಮಂಜುನಾಥ್.—ಈಗ ರಾಜ್ಯದಲ್ಲಿ ಒಟ್ಟು 33 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಇವೆ. ಅವು ಚೆನ್ನಾಗಿ ನಡೆಯುತ್ತಾ ಇವೆ. ಕಳೆದ ವರ್ಷದಲ್ಲಿ ಖಾಸಗೀಯವರು ಈ ಕೈಗಾರಿಕಾ ತರಬೇತಿಯ ಸಂಸ್ಥೆಯನ್ನು ತೆರೆಯುವುದಕ್ಕೆ ಏನು ಪರವಾನಗಿ ಕೊಟ್ಟಿದ್ದಾರೆ. ಅವುಗಳಲ್ಲಿ ಯಾವುದು ಚೆನ್ನಾಗಿ ನಡೆಯುತ್ತಾ ಇಲ್ಲ ಅಲ್ಲಿಗೆ ಜಾಯಿಂಟ್ ಡೈರಕ್ಟರ್‌ರವರನ್ನು ಕಳುಹಿಸಿ ಅದನ್ನು ಸರಿಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ವಿಷಯ : ಹರಪನಹಳಿ ತಾಲ್ಲೂಕಿನಲ್ಲಿ ಜನತಾ ಗೃಹಗಳ ನಿರ್ಮಾಣ

ಪ್ರ. ಸಂಖ್ಯೆ 58 (94) **ಶ್ರೀ ಬಿ. ಹೆಚ್. ಯಂಕಾನಾಯ್ಕ** (ಹರಪನಹಳ್ಳಿ).—ಈ ಕೆಳಿಕಂಡ ಪ್ರಶ್ನೆಗಳಿಗೆ ಮಾನ್ಯಶ್ರೀ ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?